ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**2471**
ಉತ್ತರಿಸಬೇಕಾದ ದಿನಾಂಕ	:	23.03.2022
ಉತ್ತರಿಸಬೇಕಾದ ಸಚಿವರು	:	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯಲ್ಲಿ ನೆಲ್ಲಿಹುದಿಕೇರಿ ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳ ಮಳೆಹಾನಿ ಸಂತ್ರಸ್ತರಿಗೆ ಹಂಚಿಕೆ ಮಾಡಲು ನಿವೇಶನಗಳನ್ನು ಗುರುತಿಸಿದ್ದರೂ ಕೂಡ, ಇದುವರೆಗೂ ಹಕ್ಕುಪತ್ರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ಇವರ ಕಚೇರಿಯಿಂದ ಪಡೆದ ಮಾಹಿತಿಯಂತೆ, ಕೊಡಗು ಜಿಲ್ಲೆಯ ನೆಲ್ಲಿಹುದಿಕೇರಿ, ವಾಲ್ನೂರು ತ್ಯಾಗತ್ತೂರು, ನಂಜರಾಯಪಟ್ಟಣ, ಗುಡ್ಡೆಹೊಸೂರು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಪ್ರತಿ ವರ್ಷ ನದಿ ದಡದ ಮನೆಗಳು ಕಾವೇರಿ ನದಿ ಪ್ರವಾಹಕ್ಕೆ ಒಳಪಡುತ್ತಿದ್ದು, ಇವರಿಗೆ ಶಾಶ್ವತ ನಿವೇಶನ/ಪುನರ್ವಸತಿ ಒದಗಿಸಲು 2019 ರಲ್ಲಿ ಅಭ್ಯತ್ ಮಂಗಲ ಗ್ರಾಮದ ಸರ್ವೆ ನಂ. 87/2ರಲ್ಲಿ 8.22 ಎಕರೆ ಸರ್ಕಾರಿ ಜಾಗವನ್ನು ಕಾಯ್ದಿರಿಸಿ, ಸದರಿ ಜಮೀನನ್ನು ಕಾರ್ಯನಿರ್ವಾಹಕಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಸೋಮವಾರಪೇಟೆ ತಾಲ್ಲೂಕು ಇವರಿಗೆ ಹಸ್ತಾಂತರಿಸಲಾಗಿರುತ್ತದೆ ಮತ್ತು ಸದರಿ ಜಾಗವನ್ನು ಅಭಿವೃದ್ಧಿಪಡಿಸಿದ ನಂತರ ನಿವೇಶನ ಹಕ್ಕು ಪತ್ರ ಹಂಚಿಕೆ ಮಾಡಲಾಗುವುದು.
ಆ)	ಬಂದಿದ್ದಲ್ಲಿ, ಮಳೆಹಾನಿ ಸಂತ್ರಸ್ತರಿಗೆ ಇದುವರೆಗೆ ಹಕ್ಕುಪತ್ರಗಳನ್ನು ನೀಡದಿರಲು ಕಾರಣಗಳೇನು ;	ಸದರಿ ಜಾಗಕ್ಕೆ ಅಗತ್ಯ ಮೂಲಸೌಕರ್ಯಗಳಾದ ರಸ್ತೆ, ನೀರು, ವಿದುಚ್ಛಕ್ತಿ ಸೌಲಭ್ಯ ಒದಗಿಸಬೇಕಾಗಿದ್ದು, ಈ ಜಮೀನಿನಲ್ಲಿ ನಿವೇಶನಗಳ ರಚನೆ ಮತ್ತು ಅಭಿವೃದ್ಧಿಗೆ ಅನುದಾನ ಕೋರಿರುವ ಜಿಲ್ಲಾಧಿಕಾರಿಗಳ ಪ್ರಸ್ತಾವನೆ ಆಧರಿಸಿ ಸರ್ಕಾರದ ಆದೇಶ ಸಂಖ್ಯೆ:ವಇ 54 ಹೆಚ್ಎಎಸ್ 2014, ದಿನಾಂಕ: 25.07.2014 ಮತ್ತು 11.08.2014ರಂತೆ ಪ್ರತಿ ನಿವೇಶನಕ್ಕೆ ಗ್ರಾಮೀಣ ಪ್ರದೇಶದಲ್ಲಿ ರೂ.3000/-ಗಳಂತೆ 144 ನಿವೇಶನಗಳ ರಚನೆ ಮತ್ತು ಅಭಿವೃದ್ಧಿಗೆ ರೂ.4,32,000/-ಗಳನ್ನು ಜಿಲ್ಲಾಧಿಕಾರಿಗಳ ಖಾತೆಗೆ ಬಿಡುಗಡೆ ಮಾಡಲಾಗಿದೆ. ಗುರುತಿಸಲಾಗಿರುವ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ವಿತರಿಸಲು ಫಲಾನುಭವಿಗಳ ಪಟ್ಟಿಯನ್ನು ನಿಯಮಾನುಸಾರ Online ನಲ್ಲಿ ಸಲ್ಲಿಸಲು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳಿಗೆ ತಿಳಿಸಲಾಗಿದೆ.
ಇ)	ಜಿಲ್ಲೆಯಲ್ಲಿ, ಎಷ್ಟು ಜನ ಮಳೆಹಾನಿ ಸಂತ್ರಸ್ತರನ್ನು ನಿವೇಶನದ ಹಕ್ಕುಪತ್ರ ನೀಡಲು ಇದುವರೆಗೆ ಗುರುತಿಸಲಾಗಿದೆ ;	ಕೊಡಗು ಜಿಲ್ಲೆಯಲ್ಲಿ ಹಕ್ಕುಪತ್ರ ನೀಡಲು 95 ಸಂತ್ರಸ್ತರನ್ನು ಗುರುತಿಸಲಾಗಿದೆ.

ಈ)	ಇದುವರೆಗೆ ಎಷ್ಟು ಜನ ಮಳೆಹಾನಿ ಸಂತ್ರಸ್ತರಿಗೆ ಹಕ್ಕುಪತ್ರ ನೀಡಲಾಗಿದೆ; ಹಕ್ಕುಪತ್ರ ನೀಡಲು ಬಾಕಿ ಇರುವ ಮಳೆಹಾನಿ ಸಂತ್ರಸ್ತರ ಸಂಖ್ಯೆ ಎಷ್ಟು;	ಅಭ್ಯತ್ ಮಂಗಲ ಗ್ರಾಮದ ಸರ್ವೆ ನಂ.87/2ರಲ್ಲಿ ಯಾವುದೇ ಫಲಾನುಭವಿಗಳಿಗೆ ಹಕ್ಕುಪತ್ರ ಹಂಚಿಕೆ ಮಾಡಿರುವುದಿಲ್ಲ. ಈಗಾಗಲೇ ಗುರುತಿಸಿರುವ 95 ಸಂತ್ರಸ್ಥರಿಗೆ ಹಕ್ಕುಪತ್ರ ಹಂಚಿಕೆ ಮಾಡಬೇಕಾಗಿರುತ್ತದೆ.
ಉ)	ಜಿಲ್ಲೆಯಲ್ಲಿ, ಹಕ್ಕುಪತ್ರ ನೀಡಲು ಬಾಕಿ ಇರುವ ಮಳೆಹಾನಿ ಸಂತ್ರಸ್ತರಿಗೆ ಯಾವಾಗ ಹಕ್ಕುಪತ್ರ ನೀಡಲಾಗುವುದು ?	ಅಭ್ಯತ್ ಮಂಗಲ ಗ್ರಾಮದ ಸರ್ವೆ ನಂ.87/2 ರಲ್ಲಿ ಮರ ತೆರವು ಮತ್ತು ಮೂಲಭೂತ ಸೌಕರ್ಯ ಕಲ್ಪಿಸಿದ ಕೂಡಲೇ ಹಕ್ಕುಪತ್ರ ನೀಡಲಾಗುವುದು.

ಸಂಖ್ಯೆ :ವಇ 165 ಹೆಚ್ಎಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು